ಸಾಕ್ಷಿಯ ಹೆಸರುಃ ಫೈಜ್ ಅಹಮ್ಮದ್ ಖಾನ್

ದಿನಾಂಕ 27-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಎಂ.ಆರ್.ಆರ್. ವಕೀಲರಿಂದಃ

1) ದಿನಾಂಕಃ 15.03.2008 ರಂದು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 1 ಎಂದು,

2) ದಿನಾಂಕಃ 15.03.2008 ರಂದು 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 2 ಎಂದು,

3) ದಿನಾಂಕಃ 02.12.2014 ರಂದು 2 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 3 ಎಂದು,

4) ದಿನಾಂಕಃ 23.01.2015 ರಂದು 3 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 4 ಎಂದು,

5) ದಿನಾಂಕಃ 01.06.2015 ರಂದು 1 ನೇ ಪ್ರತಿವಾದಿ 5 ಮತ್ತು 6 ನೇ ಪ್ರತಿವಾದಿಗಳಿಗೆ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 5 ಎಂದು,

6) ದಿನಾಂಕಃ 28.10.2016 ರಂದು 1 ನೇ ಪ್ರತಿವಾದಿ 5 ಮತ್ತು 6 ನೇ ಪ್ರತಿವಾದಿಗಳಿಗೆ ಬರೆದುಕೊಟ್ಟ ನೊಂದಾಯಿತ ಕ್ರಯದ ತಿದ್ದುಪಡಿಯ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 6 ಎಂದು,

7) ಜೈಬುನ್ನಿಸಾ ಎಂ.ಕೆ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು , ಅದನ್ನು ನಿಡಿ 7 ಎಂದು,

8) ದಿನಾಂಕಃ 04.02.1992 ರಂದು ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರದ ಮುಖ್ಯಾಧಿಕಾರಿಗಳು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 8 ಎಂದು,

9) ದಾವಸ್ವತ್ತಿಗೆ ಸಂಬಂಧಪಟ್ಟ ಆಸ್ತಿ ತೆರಿಗೆ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 9 ಎಂದು,

10) ದಾವಸ್ವತ್ತಿನಲ್ಲಿ ಕಟ್ಟಡ ನಿರ್ಮಾಣ ಮಾಡಲು ಮಾಡಿಸಿಕೊಂಡ ನೀಲ ನಕ್ಷೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 10 ಎಂದು,

11) ದಿನಾಂಕಃ03.07.1937 ರಂದು ಮಾಡಿಕೊಂಡ ಪೇಶೂಮನ್ ಜಾಫರ್ ಸಾಬ್, ಅಬ್ದುಲ್ ರಹೀಮ್, ಅಬ್ದುಲ್ ರಜಾಕ್ ಮತ್ತು ನಿಸ್ಸಾರ್ ಅಹಮ್ಮದ್ ರವರ ಮಧ್ಯೆ ಮಾಡಿಕೊಂಡ ನೊಂದಾಯಿತ ವಿಭಾಗ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 11 ಎಂದು,

12) ದಾವಸ್ವತ್ತಿಗೆ ಸಂಬಂಧಪಟ್ಟ ಇನ್ನೆರಡು ಆಸ್ತಿ ತೆರಿಗೆ ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿ 12 ಮತ್ತು 13 ಎಂದು,

13) ದಿನಾಂಕಃ 10.06.2015 ರಂದು ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರದ ಮುಖ್ಯಾಧಿಕಾರಿಗಳು ನೀಡಿದ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 14 ಎಂದು,

14) 2015 ರಲ್ಲಿ ಸಂದಾಯ ಮಾಡಿದ ಸ್ವಯಂ ಘೋಷಣಾ ಆಸ್ತಿ ತೆರಿಗೆಯ ಎರಡು ಚಲನ್‌ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿ 15 ಮತ್ತು 16 ಎಂದು,

15) ಎರಡು ತೆರಿಗೆ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿ 17 ಮತ್ತು 18 ಎಂದು,

16) ತೆರಿಗೆ ಚಲನ್ ಅನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 19 ಎಂದು,

17) 09 ತೆರಿಗೆ ರಶೀದಿಗಳು ಹಾಗೂ ಎರಡು ಚಲನ್‌ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ 20 ಮತ್ತು 30 ಎಂದು,

18) 2016-17 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 31 ಎಂದು,

19) 2017-18 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 32 ಎಂದು,

20) 2018-19 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 33 ಎಂದು,

21) 2019-20 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 34 ಎಂದು,

22) 2015-16 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 35 ಎಂದು,

23) 2016-17 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 36 ಎಂದು,

24) 2017-18 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 37 ಎಂದು,

25) 2018-19 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 38 ಎಂದು,

26) 2019-20 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 39 ಎಂದು,

27) 2015-16 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 40 ಎಂದು,

28) 2016-17 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 41 ಎಂದು,

29) 2017-18 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 42 ಎಂದು,

30) 2018-19 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 43 ಎಂದು,

31) 2019-20 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆ ಸ್ವಯ ನಿರ್ಧರಣಾ ನಮೂನೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 44 ಎಂದು,

32) ದಿನಾಂಕಃ10.02.1989 ರಂದು ಜನಾಬ್ ನಿಸ್ಸಾರ್ ಅಹಮ್ಮದ್ ರಬ್ಬನಿ ರವರು ಅವರ ಹೆಂಡತಿಯಾದ ಶ್ರೀಮತಿ ಎಂ.ಕೆ.ಜೈಬುನ್ನಿಸಾ ರವರಿಗೆ ಬರೆದುಕೊಟ್ಟ ದಾನಪತ್ರ (ಹಿಬಾನಾಮ)ದ ಹಾಜರುಪಡಿಸಿದ್ದು, ಅದನ್ನು ಗುರುತಿಸುವುದಕ್ಕೆ ವಾದಿ ಪರ ವಕೀಲರು ಸದರಿ ದಾಖಲೆ ಫೇಕ್ ದಾಖಲೆಯಾಗಿದೆ ಎಂದು ಅವರ ತಕರಾರಿಗೆ ಒಳಪಟ್ಟು ದಾಖಲೆಯನ್ನು ಗುರುತಿಸಬಹುದು ಎಂದು ತಿಳಿಸಿರುತ್ತಾರೆ. ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಸದರಿ ದಾಖಲೆಯನ್ನು ನಿಡಿ 45 ಎಂದು,

33) ದಾವಾಸ್ವತ್ತಿಗೆ ಸಂಬಂಧಪಟ್ಟ ಎರಡು ಇಸಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿ 46 ಮತ್ತು 47 ಎಂದು,

34) ದಿನಾಂಕಃ 08.04.2015 ರಂದು ಸಿದ್ದಿಖ್ ಅಹಮ್ಮದ್ ರವರು ಫೈಯಾಜ್ ಅಹಮ್ಮದ್ ಖಾನ್ ರವರಿಗೆ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 48 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ. ಈ ಹಂತದಲ್ಲಿ ವಾದಿ ಪರ ವಕೀಲರು ಕೆಲವೊಂದು ದಾಖಲೆಗಳ ಮೇಲೆ ಇದೇ ದಿನ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಈಗಾಗಲೇ ಹಾಜರುಪಡಿಸಿ ಗುರುತಿಸಲಾದ ದಾಖಲೆಗಳ ಮೇಲೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಕೆ.ಎಸ್. ವಕೀಲರಿಂದಃ</u>

1 ನೇ ವಾದಿಯವರ ಗಂಡ ನಿಸ್ಸಾರ್ ಅಹಮ್ಮದ್ ರವರು ತೀರಿಕೊಳ್ಳುವ ಪೂರ್ವದಲ್ಲಿ ಅವರ ಆರೋಗ್ಯಸ್ಥಿತಿ ಹೇಗಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ನಿಡಿ.45 ನ್ನು ತೋರಿಸಿ, ಇದರಲ್ಲಿರುವ ಕೊನೆಪುಟದಲ್ಲಿರುವ ದಾನಪಡೆಯುವವರ ಸಹಿಯನ್ನು ತೋರಿಸಿ, ಇದರಲ್ಲಿ ಏನೆಂದು ಸಹಿ ಮಾಡಲಾಗಿದೆ ಎಂದು ಕೇಳಿದಾಗ

ಎಂದರೆ ಸಾಕ್ಷಿ "ಎಂ.ಆರ್. ಜೈಬುನ್ನಿಸಾ" ಎಂದು ಸಹಿ ಮಾಡಲಾಗಿದೆ ಎನ್ನುತ್ತಾರೆ. ಸಾಕ್ಷಿಗೆ ಈಗ ನಿಡಿ-5 ನ್ನು ತೋರಿಸಿ, ಅದರಲ್ಲಿರುವ ಮಾರಾಟಗಾರರ ಹೆಸರ ಮೇಲಿರುವ ಸಹಿಯಲ್ಲಿ ಯಾರ ಹೆಸರು ಬರೆಯಲಾಗಿದೆ ಎಂದು ಕೇಳಿದಾಗ ಸಾಕ್ಷಿ "ಎಂ.ಆರ್. ಜೈಬುನ್ನಿಸಾ" ಎಂದು ಸಹಿ ಮಾಡಲಾಗಿದೆ ಎನ್ನುತ್ತಾರೆ. ನಿಮಗೆ ಜೈಬುನ್ನಿಸಾರವರಿಂದ ಯಾವುದಾದರೂ ಪತ್ರ ಬಂದಿತ್ತಾ ಎಂದರೆ ಸಾಕ್ಷಿ ನಮಗೆ ಕ್ರಯಪತ್ರ ಬರೆದುಕೊಟ್ಟವರು ಮಾತ್ರ ಸಂಬಂಧಿಸಿದ್ದು , ಉಳಿದ ಪತ್ರಗಳು ಬಂದಿರುವುದಿಲ್ಲ ಎನ್ನುತ್ತಾರೆ. ನನಗೆ ಯಾರು ಸಹಿ ಮಾಡಿಕೊಟ್ಟಿರುತ್ತಾರೋ ಅವರಿಂದ ನನಗೆ ಹಿಬಾನಾಮ ಬಂದಿರುತ್ತದೆ. ಜೈಬುನ್ನಿಸಾರವರಿಗೆ ಹೇಗೆ ಖಾತೆಯಾಗಿತ್ತು ಎಂದು ನನಗೆ ಗೊತ್ತಿಲ್ಲ.

2) ದಿನಾಂಕ:10.06.1992 ರಂದು ನ್ಯಾಯಾಲಯದಲ್ಲಿ ಜೈಬುನ್ನಿಸಾರವರು ಒಂದು ಪ್ರಮಾಣ ಪತ್ರವನ್ನು ಮಾಡಿಸಿಕೊಂಡು ನನ್ನ ಯಜಮಾನರು ಮಾನಸಿಕವಾಗಿ ಬಲಹೀನತೆಗೆ ಒಳಪಟ್ಟಿದ್ದು ದಿನಾಂಕ:02.05.1992 ರಂದು ದೈವಾಧೀನರಾಗಿರುತ್ತಾರೆ ಎಂದು ಹೇಳಿ ಒಂದು ಪ್ರಮಾಣ ಪತ್ರವನ್ನು ಮಾಡಿಸಿಕೊಂಡು ಅದನ್ನು ಪುರಸಭೆಗೆ ಖಾತೆ ಬದಲಾವಣೆ ನೀಡಿದ್ದು, ಅದರ ಆಧಾರದ ಮೇಲೆ ಜೈಬುನ್ನಿಸಾರವರ ಹೆಸರಿಗೆ ಖಾತೆ ಬದಲಾವಣೆಯಾದ ವಿಚಾರ ನನಗೆ ಗೊತ್ತಿಲ್ಲ. ಸಿದ್ದಿಖ್ ಅಹಮ್ಮದ್ ಬಿನ್ ಲೇ.ನಸೀರ್ ಅಹಮ್ಮದ್ ಮತ್ತು ಜೈಬುನ್ನಿಸಾರವರಿಗೆ ಏನು ಸಂಬಂಧ ಎಂದು ನನಗೆ ಗೊತ್ತಿಲ್ಲ. ಸಿದ್ದಿಖ್ ಅಹಮ್ಮದ್ ಬಿನ್ ಲೇ.ನಸೀರ್ ಅಹಮ್ಮದ್ ರವರಿಗೆ ಸ್ವತ್ತು ಹೇಗೆ ಬಂದಿತ್ತು ಎಂದು ನಾನು ತಿಳಿದುಕೊಂಡಿಲ್ಲ.

3) 1 ನೇ ಪ್ರತಿವಾದಿ ಹಾಗೂ ಅವರ ಗಂಡನ ಆರೋಗ್ಯಸ್ಥಿತಿ ಹಾಗೂ ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ದಿನಾಂಕ:03.11.2007 ರಂದು ಜೈಬುನ್ನಿಸಾರವರು ಅವರ ಒಂದೇ ಮಗ ಎಂದು ಹೇಳಿಕೊಂಡು ಸೈಯದ್ ಮನ್ಸೂರ್ ರವರನ್ನು ಹಾಗೂ ಎರಡನೇ ಮಗ ಎಂದು ಆಸಿಫ್ ಉಮರ್ ರವರು ಎಂದು ಹೇಳಿಕೊಂಡು ಅವರ ಭಾಗದ ಸ್ವತ್ತುನ್ನು ಎರಡು ದಾನಪತ್ರ ಮಾಡಿಕೊಟ್ಟ ವಿಷಯ ನನಗೆ ಗೊತ್ತಿಲ್ಲ ಸದರಿ ದಾನಪತ್ರದಲ್ಲಿ ಈ ಇಬ್ಬರು ಮಕ್ಕಳಿಗೆ ತಲಾ ಪೂರ್ವ-ಪಶ್ಚಿಮ 50 ಅಡಿ ಮತ್ತು ದಕ್ಷಿಣ-

ಉತ್ತರ 09 ಅಡಿ ಜಾಗವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ15.03.2008 ರಂದು ಸೈಯದ್ ಮನ್ಸೂರ್ ಮತ್ತು ಆಸಿಫ್ ಉಮರ್ ಬಿನ್ ಲೇ.ಮಹಮ್ಮದ್ ಶೇಕ್ ಅಮೀರ್ ರವರಿಗೆ ಜೈಬುನ್ನಿಸಾರವರು ಎರಡು ನೊಂದಾಯಿತ ಕ್ರಯಪತ್ರದ ಮೂಲಕ ತಲಾ 50 x 09 ಅಡಿಯ ಸ್ವತ್ತನ್ನು ಕ್ರಯಪತ್ರ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದಲ್ಲಿ ತಮ್ಮ ಹಿಸ್ಸೆಗೆ ಬಂದ ¼ ರ ಭಾಗದಲ್ಲಿನ 50 x 18 ರಲ್ಲಿ ತಲಾ 50 x 09 ಅಡಿ ಹಾಗೂ 50 x 09 ಅಡಿ ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಮುಂಚೆ ಗೊತ್ತಿರಲಿಲ್ಲ ಹಾಗೂ ಈಗ ಕೇಳಿದಾಗ ನನಗೆ ಗೊತ್ತಾಗಿರುತ್ತದೆ. ಜೈಬುನ್ನಿಸಾರವರಿಗೆ ಕಾಲು ಭಾಗ ಹಿಸ್ಸೆ ಬಂದಿರುತ್ತದೆ ಎಂದು ನಾನು ನಮ್ಮ ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ. ಜೈಬುನ್ನಿಸಾರವರಿಗೆ ಕಾಲು ಭಾಗ ಮಾತ್ರ ಹಿಸ್ಸೆ ಬಂದಿದೆ ಎಂದು ನಾನು ನಮ್ಮ ವಕೀಲರಿಗೆ ತಿಳಿಸಿರುವುದಿಲ್ಲ. ಕಾರಣ ನನಗೆ ಈ ವಿಷಯ ಗೊತ್ತಿರಲಿಲ್ಲ.

4) ನಾನು ಹಾಗೂ ನನ್ನ ಅಣ್ಣ 5 ನೇ ಪ್ರತಿವಾದಿ ಸೇರಿ ಸಿದ್ದಿಖ್ ಅಮಮ್ಮದ್‌ರವರಿಂದ ದಾವಾಸ್ವತ್ತನ್ನು ಖರೀದಿ ಮಾಡಿರುತ್ತೇನೆ. ಸದರಿ ಸಿದ್ದಿಖ್ ಅಮಮ್ಮದ್‌ರವರಿಗೆ ದಾವಾಸ್ವತ್ತು ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. 50 x 18 ಅಡಿ ಸ್ವತ್ತು ಸಿದ್ದಿಖ್ ಅಮಮ್ಮದ್‌ರವರಿಂದ ನನ್ನ ಅಣ್ಣ ಖರೀದಿ ಮಾಡಿದ್ದರು ಎಂದರೆ ಸರಿ. ಆಸಿಫ್ ಉಮರ್ ರವರಿಂದ ಸಿದ್ದಿಖ್ ಅಮಮ್ಮದ್‌ರವರಿಗೆ ಈ ಸ್ವತ್ತು ಬಂದಿತ್ತು ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ಸೇರಿ ತಕರಾರಿಗೆ ಒಳಪಟ್ಟ ಉಳಿದ ಸ್ವತ್ತಾದ ಪೂರ್ವ-ಪಶ್ಚಿಮ 50 ಅಡಿ ಹಾಗೂ ಉತ್ತರ-ದಕ್ಷಿಣ 11 ಅಡಿ ಸ್ವತ್ತನ್ನು ಜೈಬುನ್ನಿಸಾರವರಿಂದ ಕೊಂಡಿದ್ದೆವು ಎಂದರೆ ಸರಿ. ನಂತರ ವಿಸ್ತೀರ್ಣದಲ್ಲಿ ತಪ್ಪಾಗಿದೆ ಎಂದು ಹೇಳಿ 50 x 22 ಅಡಿ ಸ್ವತ್ತನ್ನು ತಿದ್ದುಪಡಿ ಕ್ರಯಪತ್ರದ ಮೂಲಕ ಕ್ರಯಪತ್ರ ಮಾಡಿಸಿಕೊಂಡೆವು ಎಂದರೆ ಸರಿ. ಈ ತಿದ್ದುಪಡಿ ಕ್ರಯಪತ್ರ ಮಾಡಿಸಿಕೊಂಡಾಗ ಈ ದಾವೆ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದ್ದ ಬಗ್ಗೆ ನನಗೆ ಗೊತ್ತಿಲ್ಲ.

5) ದಿನಾಂಕಃ01.06.2015 ರಂದು ಕ್ರಯಪತ್ರ ಮಾಡಿಕೊಂಡ ನಂತರ ಈ ದಾವೆ ಈ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವಾಗ ಪಕ್ಕದ ನ್ಯಾಯಾಲಯದಲ್ಲಿ ನಾನು ಮತ್ತು ನನ್ನ ಅಣ್ಣ ಎರಡು ಪ್ರತ್ಯೇಕ ದಾವೆಗಳನ್ನು ಪ್ರತಿಬಂಧಕಾಜ್ಞೆ ಕೋರಿ ಹಾಗೂ ದಾವಾಸ್ವತ್ತಿನಲ್ಲಿರುವ ಕಟ್ಟಡವನ್ನು ಕೆಡವಲು ಅನುಮತಿ ಕೋರಿ ದಾವೆಗಳನ್ನು ಸಲ್ಲಿಸಿ, ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಪಡೆದಿದ್ದೆವು ಎಂದರೆ ಸರಿ. ಆ ಸಮಯದಲ್ಲಿ ಈ ನ್ಯಾಯಾಲಯದಲ್ಲಿ ವಕೀಲರನ್ನು ನೇಮಕ ಮಾಡಿಕೊಂಡು ಹಾಜರಾಗಿದ್ದು, ಹಾಗೂ ಈ ನ್ಯಾಯಾಲಯವು ಯಥಾಸ್ಥಿತಿ ಕಾಪಾಡಬೇಕೆಂದು ಆದೇಶ ಮಾಡಿತ್ತು ಎಂದರೆ ನನಗೆ ಗೊತ್ತಿಲ್ಲ.

6) 1989 ರಲ್ಲಿ ನಿಸ್ಸಾರ್ ಅಹಮ್ಮದ್‌ರವರ ಆರೋಗ್ಯಸ್ಥಿತಿ ಹೇಗಿತ್ತು ಎಂದು ನನಗೆ ಗೊತಿತಲ್ಲ. 1989 ರಲ್ಲಿ ನಿಸ್ಸಾರ್ ಅಹಮ್ಮದ್‌ರವರು ಮಾನಸಿಕ ಆರೋಗ್ಯಸ್ಥಿತಿ ಚೆನ್ನಾಗಿರಲಿಲ್ಲ ಹಾಗೂ ಅವರು ಸಹಿ ಮಾಡುವ ಪರಿಸ್ಥಿತಿ ಇರಲಿಲ್ಲ ಎಂಬ ವಿಷಯ ನನಗೆ ಗೊತ್ತಿಲ್ಲ. ನಿಡಿ.45 ಹಿಬಾನಾಮವನ್ನು ನಾನು ಸೃಷ್ಟಿಸಿಕೊಂಡು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪತ್ರ ಬರೆದ ಎಂಕೆ. ಸಿಂಗ್ರಶೆಟ್ಟಿರವರೂ ಕೂಡ ಈ ದಾಖಲೆಗೆ ಸಹಿ ಮಾಡಿಲ್ಲ ಅವರ ಸಹಿಯನ್ನೂ ಕೂಡ ನಾನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.45 ಹಳೆಯ ಪೇಪರ್ ಮೇಲೆ ಬೆರಳಚ್ಚು ಮಾಡಿಸುವ ರೀತಿ ಕಾಣಿಸುತ್ತಿದ್ದೆ ಎಂದರೆ ಸರಿಯಲ್ಲ. ಈ ದಾಖಲೆಯನ್ನು ನಕಲಿಯಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಐಪಿಸಿ ಕಲಂ 195 ರಡಿಯಲ್ಲಿ ಅಪರಾಧ ಎಸಗಿರುತ್ತೇನೆ ಎಂದರೆ ಸರಿಯಲ್ಲ. ಯಾವ ಇಸವಿಯಲ್ಲಿ ಜೈಬುನ್ನಿಸಾರವರು ಈ ಪತ್ರವನ್ನು ನನಗೆ ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ . ಈ ಪತ್ರ ಇದೆ ಎಂದು ಯಾವಾಗ ತಿಳಿಯಿತು ಎಂದರೆ ಸಾಕ್ಷಿ ಅದು ನಮ್ಮ ಅಣ್ಣನಿಗೆ ತಿಳಿದಿತ್ತು ಎನ್ನುತ್ತಾರೆ. ನನ್ನ ಅಣ್ಣ 5 ನೇ ಪ್ರತಿವಾದಿ ಕಳೆದ 3 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಅವರು ತೀರಿಕೊಳ್ಳುವ ಮುನ್ನ ಈ ಪತ್ರ ಇದೆ ಎಂದು ಹೇಳಿರಲಿಲ್ಲ ಈ ಪತ್ರ ಇದೆ ಎಂದು ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ ಯಾವಾಗ ಎಂದು ಹೇಳಲು ಬರುವುದಿಲ್ಲ ಎನ್ನುತ್ತಾರೆ. ನಿಡಿ.45 ನ್ನು ಈ ದಾವೆಯಲ್ಲಿ ಹಾಜರಾದಾಗ, ಮಧ್ಯಂತರ

ಅರ್ಜಿ ನಂ.01 ರಲ್ಲಿ ವಿಚಾರಣೆಗೆ ಸಮಯದಲ್ಲಿ ಹಾಗೂ ನಂತರದಲ್ಲಿಯೂ ಕೂಡ ಈ ದಾಖಲೆ ಇರಲಿಲ್ಲ, ಈಗ ನಮ್ಮ ಪ್ರಕರಣಕ್ಕೆ ಬಲಪಡಿಸಲು ಈ ನಕಲಿ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

7) ಜೈಬುನ್ನಿಸಾರವರ ಇನಿಶೀಯಲ್ ಎಂ.ಕೆ.ಜೈಬುನ್ನಿಸಾ ಎಂದರೆ ನನಗೆ ಗೊತ್ತಿಲ್ಲ. ನಾನು ಕ್ರಯಪತ್ರ ಬರೆಸಿಕೊಂಡಾಗ ಅವರ ಹೆಸರು ಜೈಬುನ್ನಿಸಾ ಎಂದು ಮಾತ್ರ ಗೊತ್ತಿತ್ತು .

ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.